**1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ**

**ನ್ಯಾಯಾಲಯದಲ್ಲಿ ಬೆಳಗಾವಿ**

**SC. No: 162/2025**

CW. No: 11

**PW. No: 11**

ಸಾಕ್ಷಿದಾರರ ಹೆಸರು : ಸುರೇಶಗೌಡ ಬಡಗಿಗೌಡ್ರ

ತಂದೆಯ ಹೆಸರು : ದ್ಯಾಮನಗೌಡ ಬಡಗಿಗೌಡ್ರ

ವಯಸ್ಸು : 45 ವರ್ಷ

ಉದ್ಯೋಗ : ಒಕ್ಕಲುತನ

ವಾಸ್ತವ್ಯ : ಚುಳಕಿ, ತಾಃ ಸವದತ್ತಿ

ಇಂದು ದಿನಾಂಕಃ 01.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ಒಂದು ವರ್ಷದ ಹಿಂದೆ ಜೂನ್ ತಿಂಗಳಿನಲ್ಲಿ ನಾನು ನಮ್ಮ ಮನೆಗೆ ಟಾಯ್ಲೆಟ್ ಕಟ್ಟಿಸಿರುತ್ತೇನೆ. ಟಾಯ್ಲೆಟ್ ಕಟ್ಟಲು ಕಲಕೇರಿ ಗ್ರಾಮದ ಮಕ್ತುಮಸಾಬ ನದಾಫ ಇವನಿಗೆ ಕೆಲಸ ವಹಿಸಿದ್ದೆನು. ಅವನ ಜೊತೆಗೆ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಒಂದು ದಿನ ಕೆಲಸಕ್ಕೆ ಬಂದಿದ್ದನು. ಅವರು ಕೆಲಸ ಮುಗಿಸಿ ಹೋಗಿರುತ್ತಾರೆ. ನಂತರ ನನಗೆ ಮೃತ ಮಕ್ತುಮಸಾಬ ನದಾಫ ಕೊಲೆಯಾಗಿ ತೀರಿಕೊಂಡಿರುತ್ತಾನೆ ಎಂಬ ವಿಷಯ ನನಗೆ ಕೇಳಿ ಗೊತ್ತಾಯಿತು. ಅವನನ್ನು ಯಾರು ಮತ್ತು ಯಾವ ಕಾರಣಕ್ಕೆ ಕೊಲೆ ಮಾಡಿರುತ್ತಾರೆ ಎಂಬ ವಿಷಯ ನನಗೆ ತಿಳಿದಿಲ್ಲ. ನಾನು ಮೃತನ ಶವ ನೋಡಿರುವುದಿಲ್ಲ. ಪೋಲಿಸರ ಸಮಕ್ಷಮ ನಾನು ಆರೋಪಿ ಮತ್ತು ಮೃತನು ನಮ್ಮ ಮನೆಗೆ ಕೆಲಸಕ್ಕೆ ಬಂದ ವಿಷಯವನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯವನ್ನು ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ** ಪಾಟೀ **ಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿಯನ್ನು ನೀಡಲಾಯಿತು.)**

ಪಾಟೀ **ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿನಾಂಕ 05.06.2025ರಂದು ಮಧ್ಯಾಹ್ನ 03.00 ಗಂಟೆಗೆ ಮೃತನ ಹೆಂಡತಿ ನನಗೆ ಪೋನ ಮಾಡಿ ಸವದತ್ತಿಯ ಎಪಿಎಮ್‌ಸಿಯಲ್ಲಿ ತನ್ನ ಗಂಡನ ಕೊಲೆಯಾಗಿರುತ್ತದೆ ಬನ್ನಿ ಎಂದು ಹೇಳಿದ ಮೇರೆಗೆ

ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಕ್ತುಮಸಾಬನ ಶವ ನೋಡಿದ್ದು, ಶವದ ಮೈಮೇಲೆ ಗಾಯಗಳನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಎಪಿಎಮ್‌ಸಿ ಕಛೇರಿಯಲ್ಲಿ ಅಳವಡಿಸಿದ ಸಿಸಿಟಿವಿಯನ್ನು ಪರಿಶೀಲಿಸಿದ್ದು, ಸಿಸಿಟಿವಿಯಲ್ಲಿ ಆರೋಪಿ ಮತ್ತು ಮೃತನು ಜಗಳ ಮಾಡಿದ್ದು, ನಂತರ ದಿನಾಂಕ 05.06.2025ರಂದು ರಾತ್ರಿ 01.05 ಗಂಟೆಗೆ ಆರೋಪಿಯು ಮೃತನಿಗೆ ಕೊಲೆ ಮಾಡುವ ಉದ್ದೇಶದಿಂದ ಒಂದು ಕಲ್ಲನ್ನು ಹಿಡಿದುಕೊಂಡು ಬಂದಿದ್ದು ಕಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಲ್ಲಿನಿಂದಲೇ ಆರೋಪಿಯು ಬೆಳಗ್ಗೆ 01.30 ಗಂಟೆ ಸಮಯದಲ್ಲಿ ಮೃತನನ್ನು ಹೊಡೆದು ಕೊಲೆ ಮಾಡಿದ ವಿಷಯ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರ ಮುಂದೆ ನೀವು ಈಗ ಓದಿ ಹೇಳಿದಂತೆ, ' ನಿನ್ನೆ ದಿನಾಂಕ 05.06.2025ರಂದು ಮಧ್ಯಾಹ್ನ 3 ಗಂಟೆಗೆ ನಾನು ನಮ್ಮ ಮನೆಯಲ್ಲಿ ಇದ್ದಾಗ ಮಕ್ತುಮಸಾಬ ಮಾಬುಸಾಬ ನದಾಫ ಇವನ ಹೆಂಡತಿಯಾದ ರುಕ್ಸನಾಬಾನು ಇವಳು ನನಗೆ ಪೋನ ಮಾಡಿ................................... ........................................................... ಈ ಬಗ್ಗೆ ಮೃತನ ಹೆಂಡತಿಯಾದ ರುಕ್ಸನಾಬಾನು ಇವಳು ಮಹ್ಮದರಫಿಕ ಅಬ್ದುಲರೆಹಮಾನ ಮೆಣಸಿನಕಾಯಿ ಸಾಃ ಸಾಯಿ ನಗರ ಮುನವಳ್ಳಿ ಇವನ ಮೇಲೆ ಪಿರ್ಯಾದಿ ಕೊಟ್ಟಿದ್ದು ಇರುತ್ತದೆ. ' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-44 ಎಂದು ಗುರುತಿಸಲಾಯಿತು.

3. ದಿನಾಂಕ 09.06.2025ರಂದು ಪೋಲಿಸರು ಪುನಃ ನನ್ನನ್ನು ಠಾಣೆಗೆ ಕರೆಯಿಸಿ ಠಾಣೆಯಲ್ಲಿ ಪೋಲಿಸರ ಮುಖಾಂತರ ನನಗೆ, ಹಿಂದಿನ ದಿನ ಮೃತ ವ್ಯಕ್ತಿ ಮತ್ತು ಆರೋಪಿಯು ಸವದತ್ತಿಗೆ ಬಟ್ಟೆ ಖರೀದಿಗೆ ಬಂದಿದ್ದು, ಮೃತನು ಆರೋಪಿಯಿಂದ ರೂ.2,000/- ಸಾಲ ಪಡೆದು ನಂತರ ಸಾಲವನ್ನು ಮತ್ತು ಪಗಾರವನ್ನು ಕೊಡದೇ ಇದ್ದಾಗ ಈ ವಿಷಯವಾಗಿ ಆರೋಪಿ ಮತ್ತು ಮೃತನ ನಡುವೆ ಜಗಳವಾಗಿ ನಂತರ ದಿನಾಂಕ 05.06.2025ರಂದು ಬೆಳಗ್ಗೆ 01.00 ಗಂಟೆ ಸಮಯದಲ್ಲಿ ಹಣಕಾಸಿನ ವಿಚಾರವಾಗಿ ಆರೋಪಿ ಮತ್ತು ಮೃತನ ನಡುವೆ ಜಗಳವಾಗಿ ಆರೋಪಿಯು ಮೃತನನ್ನು ಚಹರೆ ಕಲ್ಲಿನಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾನೆ ಎಂದು ನನಗೆ ಕೇಳಿ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ

ಪೋಲಿಸರ ಸಮಕ್ಷಮ ನೀವು ಈಗ ಓದಿ ಹೇಳಿದಂತೆ, 'ಈ ದಿವಸ ನನಗೆ ಮತ್ತು ಪ್ರಕಾಶ ಉಳವಪ್ಪ ಸಂಕನ್ನವರ ಸಾಃ ಗುರ್ಲಹೊಸೂರ ಸವದತ್ತಿ.......................................................................................................... ದಿನಾಂಕ 05.06.2025ರಂದು ರಾತ್ರಿ 01.05 ಗಂಟೆಯಿಂದ 01.30 ಗಂಟೆಯ ನಡುವಿನ ಅವಧಿಯಲ್ಲಿ ಕಲ್ಲಿನಿಂದ ಹಣೆಯ ಮೇಲೆ ಮತ್ತು ತಲೆಯ ಹಿಂದೆ ಒಗೆದು ಭಾರಿಗಾಯಪಡಿಸಿ ಸ್ಥಳದಲ್ಲಿ ಮರಣ ಪಡಿಸಿರುತ್ತಾನೆ ಈಗ ತಮ್ಮಿಂದ ಕೇಳಿ ಗೊತ್ತಾಗಿದ್ದು ಇರುತ್ತದೆ.' ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯ ಭಾಗವನ್ನು ನಿಪಿ-45 ಎಂದು ಗುರುತಿಸಲಾಯಿತು.

4. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ, ಆರೋಪಿಯೇ ಮೃತನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾನೆ ಎಂಬ ವಿಷಯ ತಿಳಿದಿದ್ದರೂ, ನಿಪಿ-44 ಮತ್ತು 45ರಂತೆ ಪೋಲಿಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ **ಸವಾಲುಃ** ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.